ಅ) ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಮತ್ತು ಜೋಯಿಡಾದಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಅಗತ್ಯವಿರುವ ಜಾಗವನ್ನು ಸರ್ಕಾರದವರು ತೆಗೆದುಕೊಂಡಿರುರುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಆ ಜಾಗವನ್ನು ಯಾವಾಗ ತೆಗೆದುಕೊಳ್ಳಲಾಯಿತು?

ಇ) ಆ ಜಾಗವನ್ನು ತೆಗೆದುಕೊಂಡು ಹಲವಾರು ತಿಂಗಳುಗಳಾದರೂ ಇದುವರೆವಿಗೂ ಬಸ್ ನಿಲ್ದಾಣವ ನಿರ್ಮಾಣ ಕಾರ್ಯವನ್ನು ಪ್ರಾರಂಬಿಸದಿರಲು ಕಾರಣಗಳೇನು?

ಈ) ಸಾರ್ವಜನಿಕರ ಅನುಕೂಲವನ್ನು ಗಮನವಲ್ಲಿಟ್ಟುಕೊಂಡು ಸರ್ಕಾರ ಆದಷ್ಟು ಬೇಗನೆ ಮೇಲ್ಕಂಡ ಎರಡು ಸ್ಥಳಗಳಲ್ಲಿ ಬಸ್‌ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ನಿಜ

ಆ) ಯಲ್ಲಾಪುರದಲ್ಲಿ ದಿನಾಂಕ 16-11-66ರಲ್ಲಿ ಜೋಯಿಡಾದಲ್ಲಿ ದಿನಾಂಕ 23-8-89ರಲ್ಲಿ ನಿವೇಶನವನ್ನು ಪಡೆಯಲಾಯಿತು.

ಇ) 1) ಯಲ್ಲಾಪುರದಲ್ಲಿ ಈಗಾಗಲೆ ಬಸ್ ನಿಲ್ದಾಣ ನಿರ್ಮಿಸಲಾಗಿದ್ದು ಸಾರ್ವಜನಿಕರಿಂದ ಉಪಯೋಗಿಸಲಾಗುತ್ತಿದೆ.

2) ಆರ್ಥಿಕ ಮುಗ್ಗಟ್ಟಿನಿಂದಾಗಿ ಜೋಯಿಡಾದಲ್ಲಿ ನಿರ್ಮಿಸಲಾಗಿಲ್ಲ

ಈ) ಜೋಯಾಡದಲ್ಲಿ ನಿರ್ಮಾಣ ಕಾರ್ಯವನ್ನು 91-92ರಲ್ಲಿ ಕೈಗೊಳ್ಳಲಾಗುವುದು

ಹಳಿಯಾಳ ಮತ್ತು ಅಂಕೋಲಾ ಬಸ್ ನಿಲ್ದಾಣಗಳ ಬಗ್ಗೆ

3451 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಟ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮತ್ತು ಅಂಕೋಲಾ ಬಸ್ ನಿಲ್ದಾಣಗಳಿಗೆ ಕವರ್ಡ್ ಅಕಾಮಡೇಶನ್ ಮಂಜೂರಾಗಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಇದರ ನಿರ್ಮಾಣ ಕೆಲಸಕ್ಕಾಗಿ ಎಂದು ಟೆಂಡರ್ ಕರೆಯಗಾಗಿತ್ತು?

ಇ) ಇದುವರೆವಿಗೂ ಇದರ ಕೆಲಸವನ್ನು ಪೂರ್ಣಗೊಳಿಸದಿರಲು ಕಾರಣಗಳೇನು?

ಈ) ಸರ್ಕಾರ ಈ ಕೂಡಲೇ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ನಿಜ

ಆ) ಹಳಿಯಾಳಕ್ಕೆ ದಿನಾಂಕ 29-6-88 ರಂದು ಮತ್ತು ಅಂಕೋಲಾಕ್ಕೆ ದಿನಾಂಕ 26-5-88ರಂದು ಹಾಗೂ 27-8-88ರಂದು ಟೆಂಡರ್ ಕರೆಯಲಾಗತ್ತು.

ಇ) ನಿಗಧಿಪಡಿಸಿದ ಗುತ್ತಿಗೆದಾರರು ಕೆಲಸ ಪ್ರಾರಂಭಿಸಲು ವಿಫಲವಾದ ಕಾರಣ

ಈ) ಪುನಃ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹಳಿಯಾಳ ಮುಂಡಗೋಡ ಮತ್ತು ಯಲ್ಲಾಪುರಗಳಲ್ಲಿರುವ ಮಜರೇಗಳನ್ನು ವಿದ್ಯಾದ್ದೀಕರಣ ಮಾಡುವುದು

3455 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮುಂಡಗೋಡ ಮತ್ತು ಯಲ್ಲಾಪುರ ತಾಲ್ಲೂಕುಗಳಲ್ಲಿ ಮಜರ್‌ಗಳ ಸಂಖ್ಯೆ ಎಷ್ಟು? (ಪ್ಯಾಮ್ಲೇಟ್)

ಆ) ಈ ಮಾಜರ್‌ಗಳಲ್ಲಿ ಇದುವರೆವಿಗೂ ಎಷ್ಟಕ್ಕೆ ವಿದ್ಯುದ್ದೀಕರಣ ಮಾಡಲಾಗಿದೆ. (ಮಜರ್‌ಗಳ ಹೆಸರುಗಳ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) 1990-91 ಮತ್ತು 1991-92 ನೇ ಸಾಲಿನಲ್ಲಿ ಮೇಲ್ಕಂಡ 3 ತಾಲ್ಲೂಕುಗಳಲ್ಲಿ ಎಷ್ಟು ಮಜರ್‌ಗಳಿಗೆ ವಿದ್ಯುದ್ದೀಕರಣ ಮಾಡುವ ಗುರಿ ಹೊಂದಲಾಗಿದೆ.

ಈ) ಜಿಲ್ಲೆಯಿಂದಲೇ ವಿದ್ಯುತ್ ಉತ್ಪಾದನೆ ಮಾಡುತ್ತಿರುವಾಗ (ಕಾಳಿ ಪ್ರಾಜೆಕ್ಟ್ ವಿದ್ಯುದ್ದೀಕರಣ ಮಾಡುವ ವಿಚಾರದ ಬಗ್ಗೆ ಸರ್ಕಾರ ಪರಿಶೀಸುತ್ತದೆಯೇ?

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ)

ವಿವರಗಳು ಕೆಳಕಂಡಂತಿದೆ

ತಾಲ್ಲೂಕಿನ ಹೆಸರು	ಜನವಸತಿ ಇರುವ ಮಜರ್‌ಗಳ ಸಂಖ್ಯೆ	ಜನವಸತಿ ಇಲ್ಲದ ಮಜರ್‌ಗಳ ಸಂಖ್ಯೆ
ಹುಳಿಯಾಳ	18	2
ಮುಂಡಗೋಡ	45	4
ಯಲ್ಲಾಪುರ	513	-

ಆ) ಆಗಸ್ಟ್ 91 ರ ಅಂತ್ಯದಲ್ಲಿರುವಂತೆ ವಿದ್ಯುದ್ದೀಕರಣವಾಗಿರುವ ಮಜರ್‌ಗಳ ಸಂಖ್ಯೆಗಳ ವಿವರಗಳು ಕೆಳಕಂಡಂತಿದೆ.

ತಾಲ್ಲೂಕು	ವಿದ್ಯುದ್ದೀಕರಣವಾಗಿರುವ ಮಜರ್‌ಗಳ ಸಂಖ್ಯೆ
ಹಳಿಯಾಳ	11
ಮುಂಡಗೋಡ	17
ಯಲ್ಲಾಪುರ	285

ಮಜರ್‌ಗಳ ಹೆಸರುಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ಆದಷ್ಟು ಜಾಗ್ರತೆ ಒದಗಿಸಲಾಗುವುದು.

ಇ) 1990-91ನೇ ಸಾಲಿನಲ್ಲಿ ಈ ಮೂರು ತಾಲ್ಲೂಕುಗಳಲ್ಲಿ ಮಜರ್‌ಗಳ ವಿದ್ಯುದ್ದೀಕರಣೆ ಗುರಿಯನ್ನು ನಿಗಧಿಪಡಿಸಿರಲಿಲ್ಲ ಆದಾಗ್ಯೂ ಹಳಿಯಾಳ ತಾಲ್ಲೂಕಿನಲ್ಲಿ ಮೂರು ಮುಂಡಗೋಡ್ ತಾಲ್ಲೂಕಿನಲ್ಲಿ ಎರಡು ಮತ್ತು ಯಲ್ಲಾಪುರ ತಾಲ್ಲೂಕಿನಲ್ಲಿ ಒಂದು ಒಟ್ಟು ಅದು ಮಜರ್‌ಗಳನ್ನು ವಿದ್ಯುದ್ದೀಕರಿಸಲಾಯಿತು. 1991-92ನೇ ಸಾಲಿನಲ್ಲಿಯೂ ಸಹ ಈ ಮೂರು ತಾಲ್ಲೂಕುಗಳಲ್ಲಿ ಮಜರ್‌ಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗಧಿಪಡಿಸಿಲ್ಲ. ಆದಾಗ್ಯೂ ಈ ವರ್ಷ ಆಗಸ್ಟ್ 91ರ ಅಂತ್ಯದವರೆಗೆ ಯಲ್ಲಾಪುರ ತಾಲ್ಲೂಕಿನಲ್ಲಿ ಒಂದು ಮಜರ್‌ಅನ್ನು ವಿದ್ಯುದ್ದೀಕರಿಸಲಾಗಿದೆ.

ಈ) ಈ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗಲೇ ಉಳಿದಿರುವ ಮಜರ್‌ಗಳನ್ನು ಮಂಡಳಿಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲಕ್ಕನು ಗುಣವಾಗಿ ಹಂತ ಹಂತವಾಗಿ ವಿದ್ಯುದ್ದೀಕರಿಸಲು ಮಂಡಳಿಯು ಉದ್ದೇಶಿಸಿದೆ.

ರಾಜ್ಯದಲ್ಲಿರುವ ಸಂಜೆ ಕಾಲೇಜುಗಳ ಸಂಖ್ಯೆ